ನಮ್ಮ ಸ್ಮೃತಿಯಲ್ಲಿ ಯಾವುದೋ ಒಂದು ಚಿತ್ರ, ಮಾತು, ಬಣ್ಣ, ಮರ, ವಸ್ತುಗಳ ನೆನಪುಗಳು ಎಷ್ಟೋ ವರ್ಷಗಳ ನಂತರವೂ ಯಾಕೆ ಉಳಿದಿರುತ್ತವೆ ಎನ್ನುವುದು ನನಗೆ ತುಂಬ ಕುತೂಹಲದ ವಿಷಯ. ತುಂಬ ನಾಟಕೀಯ, ಮಹತ್ವದ ಘಟನೆಗಳು, ಸಾವು, ಆಕ್ಸಿಡೆಂಟ್, ಪ್ರಳಯ ಇಂಥ ವಿಶೇಷ ಅನುಭವಗಳು ಮಾತ್ರ ನಮ್ಮ ಸ್ಮೃತಿಯಲ್ಲಿ ಉಳಿಯುತ್ತವೆ ಎಂದು ನಾವು ಸಾಮಾನ್ಯವಾಗಿ ಅಂದುಕೊಳ್ಳುತ್ತೇವೆ. ಆದರೆ ನಮ್ಮ ಸ್ಮೃತಿಯಲ್ಲಿರುವ ಚಿತ್ರಗಳು ಹಾಗಿರುವುದಿಲ್ಲ. ನಾನು ದಾರಿಯಲ್ಲಿ ಹೋಗುವಾಗ ಒಂದು ಮರವನ್ನು ನೋಡುತ್ತೇನೆ. ಆ ಮರ ಇರುವ ಆಕಾರವೋ ಆ ಜಾಗವೋ ನಾನು ಹೋದ ಸಮಯವೋ ನನ್ನ ಬಾಲ್ಯದಲ್ಲಿ ನೋಡಿದ ಇನ್ಯಾವುದೋ ಮರದ ನೆನಪು, ಅದರ ಕೆಳಗಡೆ ಆಡಿದ ನೆನಪುಗಳನ್ನು ಮರುಕಳಿಸುತ್ತದೆ. ಅಲ್ಲಿ ಬಹಳ ಡ್ರಮಾಟಿಕ್ ಸಂಗತಿಗಳೇನೂ ನಡೆದಿರುವುದಿಲ್ಲ. ಆದರೆ ಅವು ಎಷ್ಟೋ ವರ್ಷಗಳ ನಂತರವೂ ನೆನಪಿರುತ್ತವೆ. ಇದೇ ರೀತಿ ನನ್ನ ಸ್ಮೃತಿಕೋಶಗಳಲ್ಲಿ ಕಾರ್ನಾಡರ ಕುರಿತು ಇರುವ ಎರಡು ಪ್ರಸಂಗಗಳು ನೆನಪಿಗೆ ಬರುತ್ತಿವೆ.

ಮೊದಲನೇ ನೆನಪು 1969ರ ಸುಮಾರಿನದ್ದು. ನಾನಾಗ ದಾವಣಗೆರೆಯಲ್ಲಿ ದೊಡ್ಡಪ್ಪನ ಮನೆಯಲ್ಲಿದ್ದುಕೊಂಡು ಎಸ್ಸೆಸ್ಸೆಲ್ಸಿಯಲ್ಲಿ ಓದುತ್ತಿದ್ದೆ. ಅಲ್ಲಿನ 'ಪ್ರತಿಮಾ ಸಭಾ' ಎನ್ನುವ ಸಾಂಸ್ಕೃತಿಕ ಸಂಸ್ಥೆಯ ಕಾರ್ಯಕ್ರಮವೊಂದಕ್ಕೆ ಕಾರ್ನಾಡರನ್ನು ಕರೆದಿದ್ದರು. ನಾನೂ ಆ ಕಾರ್ಯಕ್ರಮಕ್ಕೆ ಹೋಗಿದ್ದೆ.

ಕಾರ್ಯಕ್ರಮದ ಸಮಯಕ್ಕಿಂತ ಕೊಂಚ ಮೊದಲೇ ಬಂದಿದ್ದ ಕಾರ್ನಾಡರು ಕಾರ್ಯಕ್ರಮ ನಡೆಯುವ ಸಭಾಂಗಣದ ಆವರಣದಲ್ಲಿ 'ಪ್ರತಿಮಾ ಸಭಾ'ದ ಸದಸ್ಯರ ಜೊತೆ ಹರಟೆ ಹೊಡೆಯುತ್ತ ನಿಂತಿದ್ದರು. ನಾನೂ ಸುಮ್ಮನೇ ನಿಂತು ಅವರ ಮಾತು ಕೇಳಿಸಿಕೊಳ್ಳುತ್ತಿದ್ದೆ. ಅಲ್ಲಿ ಅವರು ಏನು ಮಾತಾಡಿದ್ದರು, ಚರ್ಚಿಸಿದ್ದರು ಎನ್ನುವುದೆಲ್ಲ ಏನೂ ನೆನಪಿಲ್ಲ. ನನಗೆ ನೆನಪಿರುವುದು ಒಂದೇ. ಕಾರ್ಯಕ್ರಮ ಶುರುಮಾಡೋಣ ಎಂದು ಆಯೋಜಕರು ಬಂದು ಕಾರ್ನಾಡರಿಗೆ ಹೇಳಿದರು. ಕಾರ್ನಾಡರು 'ತಿಳಿಯಾಗಿ ಹಸಿವಾಗ್ತಿದೆಯಲ್ಲ' ಎಂದರು. ಆ ಪದಪ್ರಯೋಗ ನನಗೆ ಬಹಳ ಹೊಸತು. ಅಲ್ಲೆಲ್ಲ 'ಸ್ವಲ್ಪ ಹಸಿವೆಯಾಗ್ತಿದೆ', 'ಚೂರು ಹಸಿವೆಯಾಗ್ತಿದೆ' ಎಂದೆಲ್ಲ ಹೇಳುವುದು ಗೊತ್ತಿತ್ತು. ಆದರೆ 'ತಿಳಿಯಾಗಿ ಹಸಿವಾಗ್ತಿದೆ' ಎಂಬುದನ್ನು ಕೇಳಿದ್ದು ಅದೇ ಮೊದಲು. ಆಮೇಲೆ ಅವರಿಗೆ ಏನೋ ತಂದು ಕೊಟ್ಟರು. ತಿಂದು ಆದಮೇಲೆ ಕಾರ್ಯಕ್ರಮದಲ್ಲಿ ಏನೋ ಮಾತಾಡಿದರು. ಅದ್ಯಾವುದೂ ನೆನಪಿಲ್ಲ ನನಗೆ. ಆಗಲೇ 'ತುಘಲಕ್' ಬಂದಿತ್ತು. ಸುಮಾರು ಮೂವತ್ತು–ಮೂವತ್ತೊಂದರ ಸ್ಫುರದ್ರೂಪಿ ತರುಣ ಅವರಾಗ. ಅವರು ಅಂದು ಹೇಳಿದ ಆ ಒಂದು ಶಬ್ದದ ಮೂಲಕವೇ ಕಾರ್ನಾಡರ ಚಿತ್ರ ನನ್ನ ಮನಸ್ಸಿಗೆ ಇಳಿದಿದ್ದು.

1994–95ರ ಸುಮಾರಿಗೆ ನಾನು ಕೆ.ವಿ. ಸುಬ್ಬಣ್ಣ ಅವರ ಸಲಹೆಯ ಮೇರೆಗೆ ಕನ್ನಡ ಲೇಖಕರ ಫೋಟೋಗ್ರಫಿ ಮಾಡುತ್ತಿದ್ದೆ. ಗಿರೀಶ ಕಾರ್ನಾಡರಿಗೂ ಕರೆ ಮಾಡಿ 'ಎಲ್ಲ ಲೇಖಕರ ಫೋಟೋಗ್ರಫಿ ಮಾಡುತ್ತಿದ್ದೇನೆ. ನಿಮ್ಮ ಫೋಟೋಗ್ರಫಿಯನ್ನೂ ಮಾಡಬೇಕು. ಬರಲಾ?' ಎಂದು ಕೇಳಿ ಅಪಾಯಿಂಟ್‌ಮೆಂಟ್ ತೆಗೆದುಕೊಂಡಿದ್ದೆ. ಅವರಾಗ ಬೆಂಗಳೂರಿನ ಜೆ.ಪಿ. ನಗರ ಮನೆಯಲ್ಲಿದ್ದರು.

ನಾನು ಮತ್ತು ನನ್ನ ಹೆಂಡತಿ ಉಮಾ ಸ್ಕೂಟರ್‌ನಲ್ಲಿ ಅವರ ಮನೆಗೆ ಹೋದೆವು. ನಮ್ಮನ್ನು ತುಂಬ ಹಾರ್ದಿಕವಾಗಿ ಬರಮಾಡಿಕೊಂಡರು. ಫಸ್ಟ್ ಫ್ಲೋರ್‌ನಲ್ಲಿ ಫೋಟೋಶೂಟ್ ಮಾಡುವುದು ಅಂತಾಯ್ತು. ನನ್ನ ಕುರಿತು ಅವರಿಗೆ ಏನೂ ಗೊತ್ತಿರಲಿಲ್ಲ. ಹಾಗಾಗಿ ನಾನು ಯಾವ ಥರದ ಫೋಟೋಗ್ರಫಿ ಮಾಡುತ್ತೇನೆ ಎಂಬುದನ್ನು ತಿಳಿಸಬೇಕು ಎಂದು ಕೆಲವು ಫೋಟೋಗಳನ್ನು ತೆಗೆದುಕೊಂಡು ಹೋಗಿದ್ದೆ. ಒಂದು ರೀತಿಯ ಲೆಕ್ಕಾಚಾರ ಹಾಕಿಯೇ ಫೋಟೊ ತೆಗೆದುಕೊಂಡು ಹೋಗಿದ್ದೆ. ನಾನು ತೆಗೆದುಕೊಂಡು ಹೋಗಿದ್ದು ಜಿ.ಬಿ. ಜೋಶಿ ಅವರ ಬ್ಲೋ ಅಪ್. ಯಾಕೆಂದರೆ ಜಿ.ಬಿ. ಜೋಶಿ ಅವರ ಜೊತೆ ಕಾರ್ನಾಡರಿಗೆ ನಿಕಟ ಸಂಪರ್ಕ ಇದೆ ಎನ್ನುವುದು ನನಗೆ ಗೊತ್ತಿತ್ತು.